"ಈಗೆಲ್ಲಿ ಬರ್ತಾನೆ? ಹೊಸ ಕೆಲ್ಸಕ್ಕೆ ಸೇರಿ ಆರು ತಿಂಗ್ಳೂ ಕಳೆದಿಲ್ಲ. ಇನ್ನೆರಡು ವರ್ಷಗಳು ನಿರೀಕ್ಷೆ ಮಾಡ್ಬೇಡಿ, ಅಂದಿದ್ದಾನೆ.''

"ನೆನ್ನೆತಾನೆ ಇನ್ನು ಹದಿನೈದು ದಿವ್ಸಕ್ಕೆ ಬರ್ತಾನೆ ಅಂತಂದೆ?''

"ನಾನೆಲ್ಲಿ ಹೇಳ್ದೆ ಅತ್ತೆ? ನೀವು ಹೇಳಿದ್ದು ಮರೆತು ಹೇಳದೇ ಇದ್ದಿದ್ದು ಏನೇನೋ ಊಹೆ ಮಾಡ್ಕೊತಿರ.''

"ಹೌದು ಕಣೇ. ನನಗೆ ಮರುಳು ಸುತ್ಕೊಂಡಿದೆ. ಅದಕ್ಕೇ ಏನೇನೋ ಊಹೆ ಮಾಡ್ಕೋತೀನಿ.'' ಖಾರವಾಗಿ ನುಡಿದು ಮುನಿಸಿಕೊಂಡುಬಿಟ್ಟರು. ಎಲ್ಲಾ ಎರಡು ನಿಮಿಷಗಳು. ಮತ್ತದೇ ರಾಗ!

"ವಾಣೀ, ಇವತ್ತು ಯಾವ ವಾರ?''

''ಅತ್ತೇ, ಇವತ್ತು ಇದೇ ಪ್ರಶ್ನೇನ ಹತ್ತನೇ ಬಾರಿ ಕೇಳ್ತಾ ಇದೀರ. ಗುರುವಾರ ಅಂತ ಹೇಳಿ ಹೇಳಿ ಸಾಕಾಯ್ತು. ಸ್ವಲ್ಪ ಜ್ಞಾಪಿಸಿಕೊಳ್ಳಲಾದರೂ ಪ್ರಯತ್ನ ಪಡಬಾರದೇ.''

''ನಾನ್ಯಾಕೇ ಪ್ರಯತ್ನಿಸಬೇಕು? ಇನ್ನೊಂದು ಸಲ ಹೇಳಿದ್ರೆ ನಿನ್ನ ನಾಲಿಗೆ ಸವೆದಿಹೋಗುತ್ತಾ? ನಿನ್ಗೂ ನನ್ನಂತೆ ವಯಸ್ಸಾಗತ್ತೆ. ನಿನ್ಗೂ ಜ್ಞಾಪಕ ಶಕ್ತಿ ಕುಂಠಿತವಾಗತ್ತೆ. ಆಗ ನಿನ್ನ ಮಗ್ಳೂ ನಿನ್ನನ್ನು ಹೀಗೇ ಗೋಳಾಡಿಸಲಿ. ನೀನೊಬ್ಬೇ ನನ್ನನ್ನು ಈ ರೀತಿ ಗೋಳಾಡಿಸೋದು. ಆ ರಮೇಶನ ಹೆಂಡ್ತಿಯಾಗ್ಲಿ, ನಮ್ಮ ವಾಗ್ದೇವಿಯಾಗ್ಲಿ ಒಂದು ದಿನ ನನ್ನ ಹತ್ರ ಹೀಗೆ ವರ್ತಿಸೋದಿಲ್ಲ.''

ಹೌದೌದು. ಇಬ್ರೂ ಎದುರಿಗಿದ್ರೆ ತಾನೇ ವರ್ತಿಸೋಕ್ಕೆ. ತಿಂಗ್ಳಿಗೊಮ್ಮೆ ಫೋನಿನಲ್ಲಿ ಬಣ್ಣಬಣ್ಣವಾಗಿ ಮಾತಾಡ್ತಾರಲ್ಲ ಅದೇ ನಿಮ್ಗೆ ದೊಡ್ಡದು ಎಂದು ಹೇಳಬಯಸಿದರೂ ವಾಣಿ ಬಾಯಿಗೆ ಬೀಗ ಹಾಕಿಕೊಂಡಳು.

''ನಾನೇನಾದ್ರೂ ನನ್ನತ್ತೇಗೆ ನಿನ್ನ ಥರ ಎದುರುತ್ತರ ಕೊಟ್ಟಿದ್ದರೆ ಕೈಯಲ್ಲಿರೋದ್ರಿಂದ ಬಾರಿಸಿರೋರು. ಲಟ್ಟಣಿಗೆಯಿಂದ ನಾನೆಷ್ಟು ಪೆಟ್ಟು ತಿಂದಿದ್ದೀನಿ ಗೊತ್ತಾ? ನನ್ನ ಗಂಡ ಧರ್ಮರಾಯ. ನೋಡಿದ್ರೂ ಉಸಿರೆತ್ತುತಿರಲಿಲ್ಲ. ತಾಯಿ ಅಂತಂದ್ರೆ ಅಷ್ಟು ಗೌರವ. ಈಗಿನ ಗಂಡು ಮಕ್ಕಳ ಥರ ಅಲ್ಲ,'' ಎಂದು ಸೂಚ್ಯವಾಗಿ ಹೇಳಿ ಮೂತಿ ತಿರುವಿದರು.

ಅತ್ತೆ ಇಷ್ಟೊಂದು ಖಾರವಾಗಿ ಪ್ರತಿಕ್ರಿಯಿಸುವಷ್ಟು ತಾನು ಹೇಳಿದ್ದಾದರೂ ಏನು? ತನ್ನ ಸಹನೆಗೂ ಒಂದು ಮಿತಿ ಇದೆಯಲ್ಲವೇ? ಅತ್ತೆಗೆ ಮೂರು ಮಕ್ಕಳಿದ್ದೂ ತನಗೇ ಏಕೀ ಶಿಕ್ಷೆ? ಏರುತ್ತಿದ್ದ ಉದ್ವೇಗವನ್ನು ಹತ್ತಿಕ್ಕಿಕೊಳ್ಳುತ್ತಾ ತನ್ನ ಎಂದಿನ ಕೆಲಸಕ್ಕೆ ಮರಳಿದಳು.

★★★

ಒಂದು ಮುಂಜಾನೆ ವಾಣಿಯ ಬದಲು ಹರಿ ತಾಯಿಯ ಕೈಗೆ ಕಾಫಿ ತಂದಿತ್ತ.

''ಇದೇನಿವತ್ತು ನೀನು ತರ್ತಿದ್ದೀ? ವಾಣಿ ಎಲ್ಲಿ?''

''ಅವ್ಳಿಗೆ ಮೈಗೆ ಚೆನ್ನಿಲ್ಲ. ತಲೆ ಸುತ್ತು ಅಂತ ಮಲ್ಗಿದ್ದಾಳೆ.'' ಸುದ್ದಿ ಕೇಳಿ ಆಕೆ ಭೂಮಿಗಿಳಿದು ಹೋದರು. ''ಅಯ್ಯೋ ದೇವ್ರೆ. ನೆನ್ನೆ ರಾತ್ರಿ ಚೆನ್ನಾಗಿದ್ದವಳಿಗೆ ಇವತ್ತು ಏನಾಯ್ತಪ್ಪಾ. ಭಗವಂತಾ. ನನ್ನ ಬಂಗಾರದಂಥಾ ಸೊಸೆಗೆ ಆರೋಗ್ಯಭಾಗ್ಯ ಕೊಡಪ್ಪಾ,'' ಹೇಳುತ್ತಾ ಸೊಸೆ ಮಲಗಿದ್ದ ಮಂಚದಬಳಿ ಬಂದು ಪಕ್ಕದ ಕುರ್ಚಿಯಲ್ಲಿ ಕುಳಿತುಬಿಟ್ಟರು. ''ಅವಳು ಎದ್ದು ಮೇಲೇಳುವತನಕ ಒಂದು ತೊಟ್ಟು ನೀರೂ ಕುಡಿಯುವುದಿಲ್ಲ,'' ಎಂದು ದೇವರ ವಿರುದ್ಧ ಧರಣಿ ಕುಳಿತುಬಿಟ್ಟರು! ತನ್ನತ್ತೆಯ ಕಾಳಜಿ ವಾತ್ಸಲ್ಯ ಕಂಡು ಮೂಕಳಾದ ವಾಣಿ ತುಸು ಸುಧಾರಿಸಿಕೊಂಡು ಮೇಲೆದ್ದು ದಿನಚರಿಯಲ್ಲಿ ತೊಡಗಿಕೊಂಡಳು.